## ತಲೆಯಿಲ್ಲದ ಕೇತು ದೇಹವಿಲ್ಲದ ರಾಹು

ಜ್ಯೋತಿಷ್ಯಶಾಸ್ತ್ರದ ಪ್ರಕಾರ ರವಿ, ಚಂದ್ರ, ಮಂಗಳ, ಗುರು, ಬುಧ, ಶುಕ್ರ, ಶನಿಗ್ರಹಗಳು ನಭೋಮಂಡಲದಲ್ಲಿ ಕಣ್ಣಿಗೆ ಕಾಣುವ ಗ್ರಹಗಳಾದರೆ, ರಾಹು–ಕೇತು ಕಣ್ಣಿಗೆ ಕಾಣದ ಗ್ರಹಗಳು. ಹೀಗಾಗಿ ಇವುಗಳನ್ನು ಛಾಯಾಗ್ರಹಗಳು ಎನ್ನುತ್ತಾರೆ. ನಾವು ಕೆಲವು ದೇವಾಲಯಗಳಿಗೆ ಹೋದಾಗ ನವಗ್ರಹಗಳ ವಿಗ್ರಹಗಳಿರುವ ಪುಟ್ಟ ಮಂದಿರವನ್ನು ಗಮನಿಸಬಹುದು. ಈಚೆಗೆ, ನಾನು ಮಹಾರಾಷ್ಟ್ರಕ್ಕೆ ಪ್ರವಾಸಕ್ಕೆಂದು ಹೋಗಿದ್ದಾಗ ಅಲ್ಲಿನ ರಾಯಗಢ ಜಿಲ್ಲೆಯ ಮಹಾಡ್ ಗ್ರಾಮದ ವರದ ವಿನಾಯಕ ದೇವಸ್ಥಾನದ ಆವರಣದಲ್ಲಿ ಪುಟ್ಟ ಮಂದಿರವೊಂದು ಕಂಡಿತು. ಅದರಲ್ಲಿ ಶನಿದೇವರೊಂದಿಗೆ ಶಿರ ಮಾತ್ರವುಳ್ಳ ರಾಹು ಮೂರ್ತಿ ಹಾಗೂ ಶಿರವಿಲ್ಲದ ಕೇತು ಮೂರ್ತಿ ಮಾತ್ರ ಇದ್ದದ್ದು ಆಶ್ಚರ್ಯವನ್ನುಂಟು ಮಾಡಿತು.

–ಅನುರಾಧ ಟಿ., ದಾವಣಗೆರೆ







## ಅಸಾಧಾರಣ ಅಗೋಳಿ ಮಂಜಣ್ಣ

ತಿಂಡಿಪೋತನೂ ಆಗಿದ್ದ ಹಾಗೂ ಭೀಮನ ಶಕ್ತಿಗೆ ಸರಿಸಮಾನ ಶಕ್ತಿ ಹೊಂದಿದ್ದ ಮಂಜಣ್ಣ, ಒಮ್ಮೆಗೆ ಒಂದು ಅಗೋಳಿ (20 ಸೇರು) ಅಕ್ಕಿಯಿಂದ ಮಾಡಿದ ಅನ್ನ ಭಕ್ಷಿಸುತ್ತಿದ್ದನಂತೆ. ಈ ಕಾರಣಕ್ಕೆ ಈತನನ್ನು ದಕ್ಷಿಣಕನ್ನಡ ಜಿಲ್ಲೆಯಲ್ಲಿ 'ಅಗೋಳಿ ಮಂಜಣ್ಣ' ಎಂದೇ ಕರೆಯಲಾತ್ತದೆ. ಒಮ್ಮೆ ಉಡುಪಿ ಜಿಲ್ಲೆಯ ಎರ್ಮಾಳಿನ ಉತ್ಸವಕ್ಕೆಂದು ಮಂಜಣ್ಣ ಬಂದಿದ್ದನಂತೆ. ಈತನ ಶಕ್ತಿ ಪರೀಕ್ಷಿಸಲು ಕಬ್ಬಿನ ಜಲ್ಲೆಗಳ ನಡುವೆ ಕಬ್ಬಿಣದ ಸರಳುಗಳನ್ನು ಅಡಗಿಸಿಟ್ಟು, ಎರಡು ತುಂಡು ಮಾಡುವ ಪಣ ಒಡ್ಡಿದರಂತೆ ಸ್ಥಳೀಯರು.

ನಿಮಿಷ ಮಾತ್ರದಲ್ಲಿ ಅವುಗಳನ್ನು ತುಂಡರಿಸಿದ. ತನ್ನನ್ನು ಅವಮಾನ ಮಾಡಲು ಯತ್ನಿಸಿದವರಿಗೆ ಬುದ್ಧಿ ಕಲಿಸುವ ಸಲುವಾಗಿ ಎರ್ಮಾಳಿನಲ್ಲಿ ಹರಿಯುತ್ತಿದ್ದ ನೀರಿಗೆ ಸೇತುವೆಯಂತೆ ಹಾಕಿದ್ದ 4 ಅಡಿ ಅಗಲ, 15 ಅಡಿ ಉದ್ದದ ಕಲ್ಲಿನ ಎರಡು ಚಪ್ಪಡಿಗಳನ್ನು ಎರಡು ಕೈಗಳಲ್ಲಿ ಹಿಡಿದು, ಮೂಲ್ಕಿಯ ಬಪ್ಪನಾಡು ದೇವಸ್ಥಾನದ ಹತ್ತಿರ ಹರಿಯುತ್ತಿದ್ದ ನೀರಿಗೆ ಅಡ್ಡಲಾಗಿ ನಿಲ್ಲಿಸಿದನೆಂದು ನಮ್ಮ ಪೂರ್ವಜರು ಹೇಳುತ್ತಾರೆ. ಆಧುನಿಕ ಸೇತುವೆಗಳು ನಿರ್ಮಾಣವಾದ ಬಳಿಕ ಈ ಕಲ್ಲುಗಳನ್ನು ದುರ್ಗಾ ಪರಮೇಶ್ವರಿ ದೇವಸ್ಥಾನದ ಉತ್ತರ ಭಾಗಕ್ಕೆ ಸ್ಥಳಾಂತರ ಮಾಡಲಾಯಿತಂತೆ. ಇಂದಿಗೂ ಆ ಎರಡು ಚಪ್ಪಡಿಗಳು ಅವನ ಶಕ್ತಿಗೆ ಸಾಕ್ಷಿಯಾಗಿ ಅಲ್ಲಿಯೇ ಇವೆ.

–ಕೃಷ್ಣಮೂರ್ತಿ ರಾವ್, ಬೆಂಗಳೂರು

## ಬನಶಂಕರಿಯ 'ಅನ್ನಪೂರ್ಣೇಶ್ವರಿ'ಯರು

ಬಾಗಲಕೋಟೆಯ ಬಾದಾಮಿ ತಾಲ್ಲೂಕಿನ ಶಕ್ತಿಪೀಠಗಳಲ್ಲಿ ಒಂದಾದ ಬನಶಂಕರಿದೇವಿ ಜಗನ್ಮಾತೆಯ ದರ್ಶನಕ್ಕೆ ಬಂದ ಭಕ್ತರಿಗೆ, ಅನ್ನ ಬಡಿಸುವ 'ಅನ್ನಪೂರ್ಣೇಶ್ವರಿ'ಯರಿಂದಲೂ ಶಕ್ತಿಪೀಠ ಮತ್ತಷ್ಟು ಶಕ್ತಿ ಪಡೆದಿದೆ. ಬನಶಂಕರಿ ಅಮ್ಮನವರ ದೇಗುಲದ ಸುತ್ತಲೂ ಬಿಳಿಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಕಾರ್ಯಾಳ ಹಿಂಡಿ, ಅಗಸಿ ಹಿಂಡಿ, ಕೆಂಪು ಮೆಣಸಿನಕಾಯಿ ಚಟ್ನಿ, ಗಟ್ಟಿ ಮೊಸರು, ಮಜ್ಜಿಗೆ ಹಾಗೂ ಎರಡು ಮೂರು ವಿಧದ ಕಾಳು ಪಲ್ಯ ಬುಟ್ಟಿಯಲ್ಲಿಟ್ಟುಕೊಂಡು ಅದನ್ನು ತಲೆಮೇಲೆ ಹೊತ್ತು ತಿರುಗಾಡುವ ಮಹಿಳೆಯರು ಕಾಣಸಿಗುತ್ತಾರೆ. ಅವರಿಗೆ ಇದು ಕಾಯಕ. ಹಸಿದವರಿಗೆ ಇದು ದೇವಿ ಪ್ರಸಾದ. ಅತಿ ಕಡಿಮೆ ಹಣದಲ್ಲಿ ತಾಯಂದಿರು ಈ ಭಾಗದ ವಿಶೇಷ ಊಟ ನೀಡುತ್ತಾರೆ. ಕೇವಲ ಇಪ್ಪತ್ತು ರೂಪಾಯಿಗಳಿಗೆ ಎರಡು ರೊಟ್ಟಿ, ಒಂದು ಲೋಟ ಮೊಸರು, ಮಜ್ಜಿಗೆ, ಎರಡು ಪ್ರಕಾರದ ಚಟ್ನಿ, ಕಾಳು ಪಲ್ಯ ಹಾಗೂ ಅನ್ನ ಬಡಿಸುತ್ತಾರೆ. ಆಧುನಿಕ ಮನೆಗಳಲ್ಲಿನ ಡೈನಿಂಗ್ ಟೇಬಲ್‌ಗಳಿಗಿಂತಲೂ ಯಾವುದರಲ್ಲೂ ಕಡಿಮೆ ಇಲ್ಲದ ಸಾಲು ಮಂಟಪದಲ್ಲಿ ಕುಳಿತು, ಪುಷ್ಕರಣಿ ನೋಡುತ್ತಾ, ಊಟ ಮಾಡುವುದೇ ರೋಮಾಂಚನಕಾರಿ. ಬಹುತೇಕ ಮಹಿಳೆಯರು ಬಾದಾಮಿ ಸಮೀಪದ ಹಳ್ಳಿಗಳಿಂದ ಊಟ ತಯಾರಿಸಿಕೊಂಡು ಬರುತ್ತಾರೆ. ನಿಜಕ್ಕೂ ಇವರ ಜವಾರಿ ಊಟದ ರುಚಿಯನ್ನು ಜೀವನದಲ್ಲಿ ಒಂದೊಮ್ಮೆಯಾದರೂ ಸವಿಯಿರಿ. ಇವರಿಗೆ ಸಾಕ್ಷಾತ್ 'ಅನ್ನಪೂರ್ಣೇಶ್ವರಿ' ಎಂದರೆ ತಪ್ಪಾಗಲಾರದು.

–ಮಹಾಂತೇಶ ಬಾಗೇವಾಡಿ, ಬಾಗಲಕೋಟೆ

